# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 160ರಲ್ಲಿ ದಿನಾಂಕ:04.09.2021 ರಂದು, ನಡೆದ ವಾರ್ಡ್ DETER ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ: 04.09.2021 ರಂದು ವಾರ್ಡ್ ಸಂಖ್ಯೆ 160ರ ಸೆಪ್ಟಂಬರ್ ಮಾಹೆಯ ಮೊದಲನೇ **ವಾರ್ಡ್ DETER** ಸಮಿತಿ ಸಭೆ ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು, ಅಧಿಕಾರಿಗಳು ಭಾಗವಹಿಸಿದ್ದರು. ಸಭಾಧ್ಯಕ್ಷರಾದ ನೋಡಲ್ ಅಧಿಕಾರಿಗಳು ಬೇರೆಡೆಗೆ ವರ್ಗಗೊಂಡಿದ್ದು, ನೂತನ ನೋಡಲ್ ಅಧಿಕಾರಿಗಳ ನಿಯೋಜನೆಯಾಗದೇ ಇರುವುದರಿಂದ ಅವರ ಅನುಪಸ್ಥಿತಿಯಲ್ಲಿ ಸಭೆ ನಡೆಯಿತು.

### ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀಮತಿ ವಿಜಯ ರವರು ಐಡಿಯಲ್ ಹೋಮ್ಸ್ ಬಡಾವಣೆ ನಿವಾಸಿ, ಇವರು ಐಡಿಯಲ್ ಹೋಮ್ಸ್ ಬಡಾವಣೆಯಲ್ಲಿ ಸೊಳ್ಳೆ ನಿಯಂತ್ರಣಕ್ಕೆ ಸೊಳ್ಳೆ ಔಷಧಿ ಸಿಂಪಡಿಸಲು ಕಳೆದ ಸಭೆಯಲ್ಲಿ ಕೋರಿದ್ದರೂ ಯಾವುದೇ ಕ್ರಮ ವಹಿಸಿರುವುದಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿ ತಮ್ಮ ಬಡಾವಣೆಯಲ್ಲಿ ಸೊಳ್ಳೆ ಔಷಧ ಸಿಂಪಡಿಸಲು ಮತ್ತೊಮ್ಮೆ ಕೋರಿದರು.
- ಡಾ॥ ಕಲ್ಪನಾ ರವರು ಐಡಿಯಲ್ ಹೋಮ್ಸ್ ಬಡಾವಣೆಯ Auto Gas Filling Station ಹತ್ತಿರ Footpath ಮೇಲೆ ಬೆಸ್ಕಾಂ ವತಿಯಿಂದ ಕೇಬಲ್ ಅಳವಡಿಸಲು ರಸ್ತೆ ಅಗೆದು ನಂತರ ಕೇಬಲ್ ಗಳನ್ನು ಹಾಗೇ ರಸ್ತೆಯಲ್ಲಿ ಬಿಟ್ಟಿರುವುದಾಗಿ ದೂರು ನೀಡಿ, ಕೇಬಲ್ ಗಳನ್ನು ಭೂಗತಗೊಳಿಸಿ ಚಪ್ಪಡಿ ಮುಚ್ಚಲು ಕೋರಿದರು. ದರು ಇದಕ್ಕೆ ಪ್ರತಿಕ್ರಿಯಿಸಿದ ವಾರ್ಡ್ ಅಭಿಯಂತರರು ಬೆಸ್ಕಾಂ ವತಿಯಿಂದ ಕೇಬಲ್ ಗಳನ್ನು ಭೂಗತಗೊಳಿಸಿದಲ್ಲಿ ಸಮತಟ್ಟು ಮಾಡಿ ಚಪ್ಪಡಿ ಮುಚ್ಚಲಾಗುವುದೆಂದು ತಿಳಿಸಿದರು.
- ವಾರ್ಡ್ ಸಮಿತಿ ಸದಸ್ಯರಾದ ಶ್ರೀ ಸುರೇಶ್ ರವರು ಕೆಂಚೇನಹಳ್ಳಿ ಪ್ರದೇಶದಲ್ಲಿ ರಸ್ತೆ ಅಭಿವೃದ್ಧಿಪಡಿಸಲು ಕೋರಿದರು ಇದಕ್ಕೆ ಉತ್ತರಿಸಿದ ವಾರ್ಡ್ ಅಭಿಯಂತರರು ಟೆಂಡರ್ ಪ್ರಕ್ರಿಯೆಯಲ್ಲಿದ್ದು 2–3 ವಾರದೊಳಗಾಗಿ ಕಾಮಗಾರಿ ಪ್ರಾರಂಭಿಸಲಾಗುವುದೆಂದು ತಿಳಿಸಿದರು.
- ಐಡಿಯಲ್ ಹೋಮ್ಸ್ ವೆಲ್ಫೇರ್ ಅಸೋಸಿಯೇಶನ್ ಸಂಘದ ಸದಸ್ಯರಾದ ಶ್ರೀ ಪಾಂಡುರಂಗರವರು ಈ ಕೆಳಕಂಡ ದೂರು/ಅಹವಾಲು/ಕೋರಿಕೆಗಳನ್ನು ಸಲ್ಲಿಸಿದರು.

1. ತಮ್ಮ ಪ್ರದೇಶದ 15ನೇ ಅಡ್ಡರಸ್ತೆಯಲ್ಲಿ BWSSB ವತಿಯಿಂದ ರಸ್ತೆ ಅಗೆದ ನಂತರ ಮರುಪೂರಣಗೊಳಿಸಿಸದೇ ಇರುವುದರಿಂದ ದ್ವಿಚಕ್ರ ವಾಹನ ಸವಾರರು ಬಿದ್ದು ಅಪಘಾತ ಸಂಭವಿಸಿರುವುದಾಗಿ ದೂರು ನೀಡಿ, ಅಗೆದಿರುವ ರಸ್ತೆಗಳನ್ನು ತುರ್ತಾಗಿ ಮರುಪೂರಣಗೊಳಿಸಲು ಕೋರಿದರು.
2. ಮರದ ಎಲೆಗಳನ್ನು ವಿಲೇವಾರಿಗೊಳಿಸಲು ಈಗಾಗಲೇ ಲೀವ್ ಕಾಂಪೋಸ್ಟರ್ಗಳನ್ನು ಅಳವಡಿಸಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಲೀವ್ ಕಾಂಪೋಸ್ಟರ್ ಗಳನ್ನು ಅಳವಡಿಸಲು ಕೋರಿದರು.
3. ಸುಭಾಷ್ ಗ್ರೌಂಡ್ ಅಭಿವೃದ್ಧಿಪಡಿಸುವವರೆಗೆ JCB ಸಹಾಯದಿಂದ ಸಮತಟ್ಟುಗೊಳಿಸಲು ಕೋರಿದರು ಹಾಗೂ

ಕಸ ಹಾಕುವುದನ್ನು ತಪ್ಪಿಸಲು ಕೋರಿದರು.

4.ವಾರ್ಡ್ ವ್ಯಾಪ್ತಿಯಲ್ಲಿ ಈಗಾಗಲೇ ಹಲವು ರಸ್ತೆಗಳನ್ನು ಡಾಂಬರೀಕರಣಗೊಳಿಸಿದ್ದು, ಐಡಿಯಲ್ ಹೋಮ್ಸ್ ಬಡಾವಣೆಯ ಕೆಲವು ರಸ್ತೆಗಳನ್ನು ಯಾವಾಗ ಅಭಿವೃದ್ಧಿಪಡಿಸಲಾಗುವುದೆಂದು ಕೋರಿದರು. ಇದಕ್ಕೆ ಉತ್ತರಿಸಿದ ವಾರ್ಡ್ ಅಭಿಯಂತರರು ಸದರಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಮುಂಬರುವ ಅನುದಾನದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದೆಂದು ತಿಳಿಸಿದರು. ಹಾಗೂ ಮಾನ್ಯ ಮಂತ್ರಿಗಳು ವಾರ್ಡ್ ವ್ಯಾಪ್ತಿಯಲ್ಲಿ ಪಾದಯಾತ್ರೆ ಕಾರ್ಯಕ್ರಮ ಹಮ್ಮಿಕೊಳ್ಳಲಿದ್ದು, ಸದರಿ ರಸ್ತೆಗಳನ್ನು ಅಭಿವೃದ್ಧಿಪಡಿಸುವ ವಿಷಯ ಪ್ರಸ್ತಾಪಿಸಲಾಗುವುದೆಂದು ಉತ್ತರಿಸಿದರು ಹಾಗೂ ಪಾದಯಾತ್ರೆ ಕಾರ್ಯಕ್ರಮ ಹಮ್ಮಿಕೊಂಡಾಗ ತಮಗೂ ವಿಷಯ ತಿಳಿಸಿದಲ್ಲಿ ಭಾಗವಹಿಸುವುದಾಗಿ ಪಾಂಡುರಂಗರವರು ತಿಳಿಸಿದರು.

5. ಪೊಲೀಸ್ ಇಲಾಖೆಗೆ ಸಂಬಂಧಿಸಿದ ದೂರಗಳು ಹೆಚ್ಚು ಇದ್ದು ಮುಂದಿನ ಸಭೆಗೆ ಪೊಲೀಸ್ ಇಲಾಖೆಯ ಅಧಿಕಾರಿ/ಸಿಬ್ಬಂಧಿಗಳನ್ನು ತಪ್ಪದೇ ಸಭೆಗೆ ಹಾಜರಾಗಲು ಕೋರುವಂತೆ ಮನವಿ ಮಾಡಿದರು.

- ಶ್ರೀಮತಿ ವಿಜಯ ರವರು ಐಡಿಯಲ್ ಹೋಮ್ಸ್ ಬಡಾವಣೆ ನಿವಾಸಿ, ಇವರು ನಿಮಿಶಾಂಭ ದೇವಸ್ಥಾನದ ಬಳಿ ಪೇಪರ್ ಏಜೆನ್ಸಿಯಿಂದ ಉತ್ಪತ್ತಿಯಾಗುವ ಕಸ ಸಂಗ್ರಹಿಸಲು ಪೌರ ಕಾರ್ಮಿಕರು ತೆರಳುತ್ತಿದ್ದು ಸದರಿ ಸ್ಥಳದಲ್ಲಿ ಮಾರ್ಷಲ್/ಪೋಲೀಸರನ್ನು ನಿಯೋಜಿಸಿ ಪೇಪರ್ ಏಜೆನ್ಸಿ ಯವರಿಗೆ ಕಸ ಹಾಕದಂತೆ ಸೂಚಿಸಲು ಹಾಗೂ ಉತ್ಪತ್ತಿಯಾಗುವ ಕಸವನ್ನು ಅವರಿಂದಲೇ ವಿಲೇವಾರಿ ಮಾಡಲು ಸೂಚಿಸುವಂತೆ ಕೋರಿದರು.
- ಸಿದ್ದಲಿಂಗಯ್ಯ ಪಾರ್ಕ್ ಬಳಿ ಕಸ ಸುರಿಯುತ್ತಿದ್ದು ಈ ಬಗ್ಗೆ ಮಾರ್ಷಲ್/ಕಿರಿಯ ಆರೋಗ್ಯ ಪರಿವೀಕ್ಷಕರು ಕ್ರಮ ವಹಿಸುವಂತೆ ಕೋರಿದರು.
- ಪಂತರಪಾಳ್ಯ ಇಂಡಸ್ಟ್ರಿಯಲ್ ಅಸೋಸಿಯೇಶನ್ ಸದಸ್ಯರು ಮೊದಲ ಬಾರಿ ಸಭೆಗೆ ಹಾಜರಾಗುತ್ತಿರುವುದಾಗಿ ತಿಳಿಸಿ ತಮ್ಮ ಕಿರು ಪರಿಚಯ ಮಾಡಿಕೊಂಡು ಪೆಟ್ರೋಲ್ ಬಂಕ್ ನಿಂದ ಬೃಹತ್ ನೀರುಗಾಲುವೆ ವರೆಗಿನ ರಸ್ತೆ ಅಭಿವೃದ್ಧಿಪಡಿಸಲು ಕೋರಿದರು ಇದಕ್ಕೆ ಉತ್ತರಿಸಿದ ವಾರ್ಡ್ ಅಭಿಯಂತರರು ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆಗೆ ಸಲ್ಲಿಸಿದ್ದು ಅನುಮೋದನೆ ದೊರೆತ ನಂತರ ರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದೆಂದು ತಿಳಿಸಿದರು. ಪ್ರತೀ ಸಭೆಯ ದಿನಾಂಕ ತಿಳಿಸದಲ್ಲಿ ತಮ್ಮ ಕುಂದು ಕೊರತೆ/ ಸಮಸ್ಯೆಗಳನ್ನು ತಿಳಿಸಲು ಅನುಕೂಲವಾಗುವುದಾಗಿ ತಿಳಿಸಿದರು.
- ಶ್ರೀನಾಥ್ ಬಾಬು ಹೆಚ್.ಆರ್ ಬಾಬು ರವರು ವಾರ್ಡ್ ವ್ಯಾಪ್ತಿಯ ಹಲವು ಕಡೆ Street light Box ಸುಟ್ಟು ಹೋಗಿರುವುದಾಗಿ ದೂರು ನೀಡಿ ತುರ್ತಾಗಿ ದುರಸ್ಥಿಗೊಳಿಸಲು ಕೋರಿದರು.
- ಡಾ॥ ಕಲ್ಪನಾ ರವರು ವಾರ್ಡ್ ವ್ಯಾಪ್ತಿಯ ಹಲವು ಕಡೆಗಳಲ್ಲಿ ವಿದ್ಯುತ್ ಲೈನ್ ಗೆ ತಗಲುವ ಸಂಭವವಿರುವ ಮರದ ರೆಂಬೆಗಳನ್ನು ತೆರವುಗೊಳಿಸಲು ಅಥವಾ ವಿದ್ಯುತ್ ಕೇಬಲ್ ಗಳನ್ನು ಎತ್ತರಕ್ಕೆ ಅಳವಡಿಸಲು ಕೋರಿದರು. ಇದಕ್ಕೆ ಉತ್ತರಿಸಿದ ಕಿರಿಯ ಅಭಿಯಂತರರು ಬೆಸ್ಕಾಂ ರವರು ವಿದ್ಯುತ್ ಕೇಬಲ್ ಗಳಿಗೆ ತಗಲುವ ಸಂಭವವಿರುವ ಮರದ ರೆಂಬೆಗಳನ್ನು ಬೆಸ್ಕಾಂ ವತಿಯಿಂದ ತೆರವುಗೊಳಿಸಿ ವಿಲೇವಾರಿ ಮಾಡಲಾಗುತ್ತಿರುತ್ತದೆ. ಹಾಗೂ ವಿದ್ಯುತ್ ಕೇಬಲ್‌ಗಳನ್ನು ಭೂಗತಗೊಳಿಸುತ್ತಿದ್ದು ಶಾಶ್ವತ ಪರಿಹಾರ ಒದಗಿಸಲಾಗುವುದೆಂದು ತಿಳಿ ದರು.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಕಛೇರಿಯ ವ್ಯಾಪ್ತಿಗೆ ಒಳಪಡುವ ಈ ಕೆಳಕಂಡ ದೂರುಗಳನ್ನು ಸಾರ್ವಜನಿಕರು ನೀಡಿದರು.

- ಐಡಿಯಲ್ ಹೋಮ್ಸ್ ಬಡಾವಣೆಯ 15ನೇ ಅಡ್ಡರಸ್ತೆಯಲ್ಲಿ Automatic Switch ಅಳವಡಿಸಲು ಕೋರಿದರು ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು 2-3 ದಿನಗಳೊಳಗಾಗಿ ಬಾಕ್ಸ್ ಅಳವಡಿಸಲಾಗುವುದೆಂದು ತಿಳಿಸಿದರು.
- ಪಂತರಪಾಳ್ಯ ಪ್ರದೇಶದಲ್ಲಿ ಬೀದಿ ದೀಪ ಬೆಳಗುತ್ತಿಲ್ಲವೆಂದು ಪಂತರಪಾಳ್ಯ ಇಂಡಸ್ಟ್ರಿಯಲ್ ಅಸೋಸಿಯೇಶನ್ ಸದಸ್ಯರು ದೂರು ನೀಡಿ ಶೀಘ್ರವಾಗಿ ಬೀದಿ ದೀಪ ದುರಸ್ಥಿಪಡಿಸುವಂತೆ ಕೋರಿದರು
  ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರು 11Kv ಸಾಮರ್ಥ್ಯದ ವಿದ್ಯುತ್ ಕೇಬಲ್ ಹಾದು ಹೋಗಿರುವುದರಿಂದ ಬೀದಿ ದೀಪ ಅಳವಡಿಸಲು ಸಾಧ್ಯವಾಗಿರುವುದಿಲ್ಲ ಮುಂದಿನ ದಿನಗಳಲ್ಲಿ ಬೀದಿ ದೀಪ ಅಳವಡಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.

➢ ಐಡಿಯಲ್ ಹೋಮ್ ಬಡಾವಣೆ ನಿವಾಸಿಗಳು ರಸ್ತೆ ಬದಿ ಸ್ವಚ್ಛಗೊಳಿಸಲು ಕೋರಿದರು ಇದಕ್ಕೆ ಪ್ರತಿಕ್ರಿಯಿಸಿದ ಸದಸ್ಯ ಕಾರ್ಯದರ್ಶಿಗಳು ಸಂಬಂಧಪಟ್ಟ ಕಿರಿಯ ಆರೋಗ್ಯ ಪರಿವೀಕ್ಷಕರು ಸೂಕ್ತ ಕ್ರಮ ಕೈಗೊಂಡು ಮುಂದಿನ ಸಭೆಯೊಳಗೆ ವರದಿ ನೀಡುವಂತೆ ಸೂಚಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-

ಸದಸ್ಯ ಕಾರ್ಯದರ್ಶಿಗಳು ವಾರ್ಡ್ DETER ಸಮಿತಿ
ವಾರ್ಡ್ ಸಂಖ್ಯೆ-160

ನೋಡಲ್ ಅಧಿಕಾರಿಗಳು ವಾರ್ಡ್ DETER ಸಮಿತಿ
ವಾರ್ಡ್ ಸಂಖ್ಯೆ-160

***<u>ಪ್ರತಿಯನ್ನು:-</u>***

1. ಮಾನ್ಯ ವಲಯ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
2. ಮಾನ್ಯ ಜಂಟಿ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
4. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.